**ಓ.ಎಸ್. ನಂ. 474/2013**
**ಪಿ.ಡಬ್ಲ್ಯೂ-2**

**(ಇಂದು ದಿನಾಂಕಃ 04-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಬೋಧಿಸಲಾಯಿತು)**
**ಮುಂದುವರೆದ ಪಾಟೀ ಸವಾಲು :ಪ್ರತಿವಾದಿ ನಂ.1 ಪರ ವಕೀಲರಿಂದಃ**

ಸಜ್ಜಾಳ ಗ್ರಾಮ ಪಂಚಾಯತಿ ಬೇಟಗೇರಿ ಗ್ರಾಮ ಪಂಚಾಯತಿಯಲ್ಲಿ ಬರುತ್ತದೆ ಎಂದರೆ ಸರಿ. ಉದಗಟ್ಟಿ ಎನ್ನುವುದು ಪ್ರತ್ಯೇಕವಾದ ಪಂಚಾಯತಿ ಆಗಿರುತ್ತದೆ ಎಂದರೆ ಸರಿ. 1992 ಸಾಲಿನ ಪೂರ್ವದಲ್ಲಿ ಮಂಡಳ ಪಂಚಾಯತಿ ಇದ್ದು ಬೇಟಗೇರಿ ಗ್ರಾಮ ಮಂಡಳ ಪಂಚಾಯತಿಯಲ್ಲಿ ಬರುತ್ತಿತ್ತು ಎಂದರೆ ಸರಿ. ಸದರಿ ಮಂಡಳ ಪಂಚಾಯತಿಯಲ್ಲಿ ಈಗ ಉದಗಟ್ಟಿ, ಹಡಗಿನಾಳ, ಕಲಾರಕೊಪ್ಪ, ಬೇಟಗೇರಿ, ತಪಸಿ, ಕೆಮ್ಮನಕೋಲ ಹಾಗೂ ಸಜ್ಜಾಗ ಕೂಡಿ ಮಂಡಳ ಪಂಚಾಯತಿ ಆಗಿದ್ದವು ಎಂದರೆ ಸರಿ.

ಈ ದಾವೆಯನ್ನು ಸಲ್ಲಿಸಲು ಮಾಹಿತಿಯನ್ನು ನಮ್ಮ ತಂದೆಯವರು ಕೊಟ್ಟಿರುತ್ತಾರೆ ಎಂದರೆ ಸರಿ. ಅದೇ ರೀತಿ ಸಾಕ್ಷಿಯನ್ನು ನೀಡಲು ಮಾಹಿತಿಯನ್ನು ಕೂಡಾ ನಿಮ್ಮ ತಂದೆಯವರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎಂದು ನುಡಿದು ನನಗೂ ಕೂಡಾ ಗೊತ್ತಿರುತ್ತದೆ ಎಂದು ನುಡಿದಿರುತ್ತಾರೆ. ನಮ್ಮ ವಕೀಲರಿಗೆ ಮಾಹಿತಿ ಕೊಡುವ ಸಂದರ್ಭದಲ್ಲಿ ನಾನು ಹಾಗೂ ನಮ್ಮ ತಂದೆಯವರು ಹಾಜರಿದ್ದೆವು. ದಾವಾ ಮಾಹಿತಿಯನ್ನು ಕೊಡುವ ಸಂದರ್ಭದಲ್ಲಿ ನಾನು ಇದ್ದೆ ಎಂದು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ಈ ದಾವೆಯನ್ನು ಹಾಕಲು ಹಾಗೂ ಸಾಕ್ಷಿಯನ್ನು ನೀಡಿಲು ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಗೊತ್ತಿಲ್ಲ. ನಿಪಿ-15 ದಾಖಲಾತಿಯಲ್ಲಿ ಈಗಿನ ವಿಪಿಸಿ ಸಂಖ್ಯೆ 949 ಅಥವಾ ಹಳೆಯ ವಿಪಿಸಿ ಸಂಖ್ಯೆ 518 ನಮೂದಿಸಿರುವುದಿಲ್ಲ ಎಂದರೆ ಸರಿ. ನಿಪಿ-15 ದಾಖಲಾತಿ ಓವರ ರೈಟಿಂಗ ಮಾಡಿದ ಹಾಗೆ ಬರೆಗಣ್ಣಿಗೆ ಕಾಣಿಸುತ್ತದೆ ಎಂದರೆ ಸರಿ. ನಿಪಿ-15 ದಾಖಲಾತಿಯಲ್ಲಿ ಅಳತೆ 20x30 ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಅದೇ ರೀತಿ ಸದರಿ ದಾಖಲಾತಿಯಲ್ಲಿ ಪೂಟ, ಸೆಂ.ಮೀ ಅಥವಾ ಅಡಿ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ದಾವಾ ಆಸ್ತಿಯ ಅಳತೆ ಕೇವಲ East west 20 ಹಾಗೂ South north 30 ಎಂದು ಮಾತ್ರ ನಮೂದಿಸಿದ್ದು ಪೂಟ, ಸೇಂ ಮೀ ಅಥವಾ ಅಡಿ ನಮೂದಿಸಿರುವುದಿಲ್ಲ ಎಂದರೆ ಸರಿ. ನಿಪಿ-15 ರಲ್ಲಿ ಉದ್ದ ಅಗಲ ಎಂದು ಬರೆದಿದ್ದು ಪೂರ್ವ ಪಶ್ಚಿಮ ಹಾಗೂ ಉತ್ತರ ದಕ್ಷಿಣ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ಅದೇ ರೀತಿ ನಿಪಿ-15 ರಲ್ಲಿ ಕೇವಲ 20x30 ಎಂದು ಬರೆಸಿದ್ದು ಪೂಟ, ಸೇಂ ಮೀ ಅಥವಾ ಅಡಿ ನಮೂದಿಸಿರುವುದಿಲ್ಲ ಎಂದರೆ ಸರಿ.

**ಓ.ಎಸ್. ನಂ. 474/2013**
**ಪಿ.ಡಬ್ಲ್ಯೂ-2**

ನಮ್ಮ ತಂದೆಯವರು ಯಾವ ಆಧಾರದ ಮೇರೆಗೆ ವಾದ ಪತ್ರದಲ್ಲಿ ಪೀಟ ಎಂದು ಬರೆಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ-15 ದಾಖಲಾತಿಯ 4 ನೇ ನಿಯಮದಲ್ಲಿ ಸಾಮಾನ್ಯವಾಗಿ ನಮ್ಮ ಕುಟುಂಬದ ಸದಸ್ಯರಿಗೆ ಕೃಷಿ ಜಮೀನು ಇದ್ದರೆ ಸದರಿ ಹಕ್ಕು ಬಿಟ್ಟ ಪತ್ರ ಕ್ಯಾನ್ಸಲ ಆಗುತ್ತದೆ ಎಂದು ಬರೆದಿರುತ್ತಾರೆ ಎಂದರೆ ಸರಿ. ನಮ್ಮ ತಾಯಿ ಗಂಗವ್ವ ರವರ ಹೆಸರಿಗೆ ಸಜ್ಜಾಳದಲ್ಲಿ ಆಸ್ತಿ ಇರುತ್ತದೆ ಎಂದರೆ ಸರಿ. ಆ ಕಾರಣ ನಿಪಿ-15 ರ 4 ನೇ ನಿಯಮದ ಪ್ರಕಾರ ಸದರಿ ಹಕ್ಕು ಬಿಟ್ಟ ಪತ್ರ ರದ್ದಾಗುತ್ತದೆ ಎಂದರೆ ಸರಿಯಲ್ಲ.

ನಿಪಿ-15 ರ 10 ನೇ ನಿಯಮದಲ್ಲಿ ಸದರಿ ಆಸ್ತಿಯನ್ನು ಪಡೆದುಕೊಂಡ 2 ವರ್ಷಗಳಲ್ಲಿ ಗುಡಿಸಲು ಅಥವಾ ಮನೆಯನ್ನು ಕಟ್ಟಿಸಬೇಕು ಎಂದು ನಿಯಮವಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ನಾವು 2 ವರ್ಷಗಳಲ್ಲಿ ಗುಡಿಸಲನ್ನು ಕಟ್ಟಿಸಿರುತ್ತೇವೆ. ನಾವು ದಾವಾ ಆಸ್ತಿಯಲ್ಲಿ 2 ವರ್ಷಗಳಲ್ಲಿ ಗುಡಿಸಲನ್ನು ಕಟ್ಟಿಸಿರುತ್ತೇವೆ ಎಂದು ನನ್ನ ಬಾಯಿ ಮಾತನ್ನು ಹೊರತುಪಡಿಸಿ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿ. ಈಗಲೂ ಕೂಡಾ ದಾವಾ ಆಸ್ತಿ ಹಳೆಯ ಸಂಖ್ಯೆ ವಿಪಿಸಿ-518/ಈಗಿನ ಸಂಖ್ಯೆ ವಿಪಿಸಿ-949 ಹಾಗೂ ಪ್ರತಿವಾದಿಯವರ ಆಸ್ತಿ ವಿಪಿಸಿ ಸಂಖ್ಯೆ 15 ಬೇರೆ ಬೇರೆ ಆಸ್ತಿಗಳು ಆಗಿರುತ್ತವೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಾನು ಸದರಿ ಆಸ್ತಿಗಳು ಬೇರೆ ಬೇರೆ ಆಸ್ತಿಗಳು ಆಗಿರುತ್ತವೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ಬೇಟಗೇರಿ ಗ್ರಾಮ ಪಂಚಾಯತಿ ರವರು ದಿಃ 18-04-2017 ರಂದು ಸದರಿ ಗ್ರಾಮ ಪಂಚಾಯತಿಯಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದ ಯಾವುದೇ ದಾಖಲಾತಿ ಇರುವುದಿಲ್ಲ ಎಂದು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಗ್ರಾಮ ಪಂಚಾಯತಿಯಲ್ಲಿ ಇರುವುದಿಲ್ಲ ಆದರೆ ಮಂಡಳ ಪಂಚಾಯತಿಯಲ್ಲಿ ಇರುತ್ತದೆ ಎಂದು ನುಡಿದಿರುತ್ತಾರೆ. ನಿಪಿ-15 ಹಕ್ಕು ಪತ್ರದ ಸಂಬಂಧ ಯಾವುದೇ ದಾಖಲಾತಿಗಳು ಇರದೇ ಇದ್ದರೂ ಕೂಡಾ ದಾಖಲಾತಿಗಳು ಇರುತ್ತವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಆಸ್ತಿಯ ಉತ್ತರಕ್ಕೆ ಹುಸೇನಸಾಬ ರಾಮದುರ್ಗರವರ ಆಸ್ತಿ ಇರುತ್ತದೆ. ಪ್ರತಿವಾದಿ ನಂ.1 ರವರ ಆಸ್ತಿಯ ಉತ್ತರ ದಿಕ್ಕಿಗೆ ಗೋವಿಂದ ಅ ಚಕ್ರಿ ರವರ ಆಸ್ತಿ ಇರುತ್ತದೆ.

ವಿಪಿಸಿ ಸಂಖ್ಯೆ-15 ಆಸ್ತಿ ಪ್ರತಿವಾದಿ ನಂ.2 ರವರ ಪೂರ್ವಜರ ಆಸ್ತಿ ಆಗಿರುತ್ತದೆ ಎಂದರೆ ಇರಬಹುದು. ಸದರಿ ಆಸ್ತಿಗೆ 2003-04 ಸಾಲಿನಲ್ಲಿ ವಿಪಿಸಿ-15 ಎಂದು ಸಂಖ್ಯೆ ಕೊಟ್ಟಿದ್ದು ಅದರ

ಪೂರ್ವದಲ್ಲಿ ಅದರ ಸಂಖ್ಯೆ-12 ಎಂದು ಇತ್ತು ಎಂದರೆ ಗೊತ್ತಿರುವುದಿಲ್ಲ. ಆಸ್ತಿ ಸಂಖ್ಯೆ ವಿಪಿಸಿ -15 ಆಸ್ತಿಯನ್ನು 2 ನೇ ಪ್ರತಿವಾದಿ ಅವರ ಅಡಚಣೆಯ ಕುರಿತು ದಿಃ 31-10-2012 ರಂದು ರೂ.2,00,000/-ಗಳಿಗೆ 1 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಸದರಿ ಆಸ್ತಿಯ ಅಳತೆ ಪೂರ್ವ ಪಶ್ಚಿಮ 60 ಹಾಗೂ ದಕ್ಷಿಣ ಉತ್ತರ 65 ಇದ್ದು ಒಟ್ಟು 3900 ಚದರ ಅಡಿ ಇತ್ತು ಎಂದರೆ ಇರಬಹುದು. ಅಂದಿನಿಂದ ಇಲ್ಲಿಯವರೆಗೆ ಸದರಿ ಆಸ್ತಿಗೆ ಪ್ರತಿವಾದಿ ನಂ.2 ರವರ ಹೆಸರು ಇರುತ್ತದೆ ಎಂದರೆ ಗೊತ್ತಿರುವುದಿಲ್ಲ. ಸದರಿ ಅವರು ಸಾಕಷ್ಟು ಖರ್ಚು ಮಾಡಿ ಸದರಿ ಆಸ್ತಿಯಲ್ಲಿ ಮನೆಯನ್ನು ಕೂಡಾ ಕಟ್ಟಿರುತ್ತಾರೆ ಎಂದರೆ ಸರಿ. ಆಸ್ತಿ ಸಂಖ್ಯೆ ವಿಪಿಸಿ-15 ನೇದ್ದರಲ್ಲಿ ದಿಃ 31-10-2012 ರಿಂದ ಇಲ್ಲಿಯವರೆಗೂ 1 ನೇ ಪ್ರತಿವಾದಿ ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ನಾವು ಕಬ್ಜೆಯಲ್ಲಿ ಇರುತ್ತೇವೆ ಎಂದು ನುಡಿದಿರುತ್ತಾರೆ.

ನಾನು ವಿಪಿಸಿ-15 ರ ಆಸ್ತಿಯಲ್ಲಿ ಕಬ್ಜೆಯಲ್ಲಿ ಇರುತ್ತೇನೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಆಸ್ತಿ ಸಂಖ್ಯೆ ವಿಪಿಸಿ-15 ರ ಕಬ್ಜೆಯಲ್ಲಿ ಇರುವುದಿಲ್ಲ ಆ ಆಸ್ತಿ ಹಾಗೂ ನಮ್ಮ ಆಸ್ತಿ ಬೇರೆ ಬೇರೆ ಆಗಿರುತ್ತವೆ ಎಂದು ನುಡಿದಿರುತ್ತಾರೆ. ನಾನು 1 ನೇ ಪ್ರತಿವಾದಿ ಕಟ್ಟಿರುವ ಮನೆಯನ್ನು ನೋಡಿರುತ್ತೇನೆ. ಸದರಿ ಆಸ್ತಿಯ 3 ದಿಕ್ಕಿಗೆ ಮನೆಗಳು ಇರುತ್ತವೆ ಎಂದರೆ ಸರಿ.

ಪ್ರತಿವಾದಿ ನಂ.1 ಪರ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಕಾರಣಗಳು ಕಂಡು ಬಂದ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

(Smt. Surya Prabha H.D)
Addl. CJ & JMFC, Gokak